ಅ) ಕೋಲಾರ ಜಿಲ್ಲೆಯಲ್ಲಿ ಸರ್ಕಾರ ಗುರ್ತಿಸಿರುವ ಪ್ರವಾಸಿ ಕೇಂದ್ರಗಳಾವುವು (ವಿವರ ಒದಗಿಸುವುದು),

ಆ) ಈ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಪ್ರಸ್ತುತ ವರ್ಷ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು,

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಕೋಲಾರ ಜಿಲ್ಲೆಯಲ್ಲಿ ಈ ಕೆಳಕಂಡ ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ –

1) ವಿದುರಾಶ್ವತ್ಥ 2) ಮಿಣಕನಗುರ್ಕಿ 3) ನಂದಿಬೆಟ್ಟ

4) ಮುದ್ದೇನಹಳ್ಳಿ 5) ಬಂಗಾರ ತಿರುಪತಿ 6) ಕೈವಾರ

7) ಕುರುಡಮಲೈ 8) ಮುಳಬಾಗಿಲು 9) ಕಮ್ಮಸಂದ್ರ

10) ಬೇತಮಂಗಲ (ಕೋಟಿಲಿಂಗೇಶ್ವರ) 11) ಬಾಗೇಪಲ್ಲಿ

ಆ) ಪ್ರಸ್ತುತ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಕೆಳಕಂಡ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದ್ದು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ

1) ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ರೂ 12 50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

2) ಕೈವಾರದಲ್ಲಿ ರೂ 12 70 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ನಿರ್ಮಿಸಲಾಗುತ್ತಿದ್ದು, ಕಾಮಗಾರ ಪ್ರಗತಿಯಲ್ಲಿದೆ

1541 (2062) ಶ್ರೀ ಶ್ರೀರಾಮರೆಡ್ಡಿ ಜಿ ಎ (ಬಾಗೇಪಲ್ಲಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಾಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್‌ನ ಪ್ರಮಾಣವೆಷ್ಟು (ವಿವಿಧ ಮೂಲಗಳ ವಿವರ ಒದಗಿಸುವುದು),

ಆ) ರಾಜ್ಯದಲ್ಲಿ ಹಾಲಿ ಬೇಡಿಕೆಯಿರುವ ವಿದ್ಯುತ್‌ನ ಪ್ರಮಾಣವೆಷ್ಟು (ಗೃಹ ಬಳಕೆ, ನೀರಾವರಿ ಪಂಪುಸೆಟ್, ಸಣ್ಣ ಕೈಗಾರಿಕಾ ವಲಯ, ಬೃಹತ್ ಕೈಗಾರಿಕೆ ಹೀಗೆ ಪ್ರತ್ಯೇಕ ವಿವರ ಒದಗಿಸುವುದು),

ಇ) ಉತ್ಪಾದನೆಗಿಂತ ಹೆಚ್ಚಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದಲ್ಲಿ ಹಾಲಿ ವಿವಿಧ ಮೂಲಗಳಿಂದ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣ ಈ ಕೆಳಗಿನಂತಿದೆ

ಕ್ರ ಸಂ	ಮೂಲಗಳ ಹೆಸರು	ಹಾಲಿ ಸರಾಸರಿ ದಿನವಹಿ ವಿದ್ಯುತ್ ಉತ್ಪಾದನಾ (ದ ಲ ಯೂನಿಟ್‌ಗಳಲ್ಲಿ)
1	**ಕೆ ಪಿ ಸಿ ಎಲ್ ಸ್ಥಾವರಗಳು**	
	ಅ) ಜಲ ವಿದ್ಯುತ್	48 04
	ಆ) ಉಷ್ಣ ವಿದ್ಯುತ್	32 92
2	**ವಿ ವಿ ಎನ್ ಎಲ್**	
	ಅ) ಜಲ ವಿದ್ಯುತ್	1 96
	ಆ) ಡೀಸೆಲ್ ವಿದ್ಯುತ್	1 32
3	ಬೃಹತ್ ಖಾಸಗಿ ವಿದ್ಯುತ್ ಸ್ಥಾವರಗಳು	6 56
4	ಅಸಂಪ್ರದಾಯಕ ವಿದ್ಯುತ್ ಮೂಲಗಳಿಂದ	6 00
	ಒಟ್ಟು	**96 81**

ಆ) ಪ್ರಸ್ತುತ ಮಾರ್ಚ್ 2007ರ ಪ್ರತಿದಿನದ ಸರಾಸರಿ ವಿದ್ಯುತ್ ಬೇಡಿಕೆ ಸುಮಾರು 132 ದಶಲಕ್ಷ ಯೂನಿಟ್ಟುಗಳು

ಗೃಹ ಬಳಕೆ, ನೀರಾವರಿ ಪಂಪುಸೆಟ್, ಸಣ್ಣ ಕೈಗಾರಿಕಾ ವಲಯ, ಬೃಹತ್ ಕೈಗಾರಿಕಾ ಇತ್ಯಾದಿಗಳ ಬೇಡಿಕೆಯ ವಿವರಗಳು ಈ ಕೆಳಕಂಡಂತಿದೆ

ಕ್ರ. ಸಂ	ಪ್ರವರ್ಗ	ಬೇಡಿಕೆ ದ ಲ ಯೂನಿಟ್‌ಗಳಲ್ಲಿ	ಶೇಕಡಾವಾರು
1	ಗೃಹ ಬಳಕೆ	26 4	20%
2	ನೀರಾವರಿ ಪಂಪುಸೆಟ್	47 52	36%
3	ಸಣ್ಣ ಕೈಗಾರಿಕೆ	8 316	6 3%
4	ಬೃಹತ್ ಕೈಗಾರಿಕೆ	22 44	17%
5	ವಾಣಿಜ್ಯ	13 2	10%
6	ನೀರು ಸರಬರಾಜು ಮತ್ತು ಬೀದಿ ದೀಪಗಳು	11 88	9%
7	ಇತರೆ	2 244	1 7%
	ಒಟ್ಟು	**132 00**	**100%**

ಇ) ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ದೀರ್ಘಕಾಲಿಕ ಕ್ರಮವಾಗಿ ಹಲವಾರು ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ

1) 500 ಮೆ ವಾಟ್ ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಕಾಮಗಾರಿಯು ಭರದಿಂದ ಸಾಗುತ್ತಿದೆ

2) ವರಾಹಿ ಜಲ ವಿದ್ಯುತ್ ಯೋಜನೆಯ 230 ಮೆ ವ್ಯಾಟ್ ಸಾಮರ್ಥ್ಯದ 2 ನೇ ಹಂತ ಕಾಮಗಾರಿಯು ಪ್ರಗತಿಯಲ್ಲಿದೆ

3) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಘಟಕ 8 (250 ಮೆಗಾವ್ಯಾಟ್) ಮೆ॥ ಬಿ ಹೆಚ್ ಇ ಎಲ್ ರವರಿಗೆ ಕಾಮಗಾರಿಗಳಿಗಾಗಿ ಅನುಮತಿ ಪತ್ರ ನೀಡಲಾಗಿದ್ದು, ಪರಿಸರ ಮತ್ತು ಅರಣ್ಯ ಸಚಿವಾಲಯದ ಒಪ್ಪಿಗೆ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

4) ನಾಗಝರಿ ವಿದ್ಯುದಾಗಾರದ 4, 5 ಮತ್ತು 6 ನೇ ಘಟಕಗಳನ್ನು 165 ಮೆಗಾವ್ಯಾಟ್ ನಿಂದ 150 ಮೆಗಾವ್ಯಾಟ್‌ಗಳಿಗೆ ಉನ್ನತೀಕರಣಗೊಳಿಸುವ ಕೆಲಸವನ್ನು 2007 ರ ವೇಳೆಗೆ ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು

5) ಖಾಸಗಿ ವಲಯದಲ್ಲಿ ನಾಗಾರ್ಜುನ ಪವರ್ ಕಾರ್ಪೊರೇಷನ್ ಕಂಪನಿ ಸಂಸ್ಥೆಯು ಮಂಗಳೂರು ಬಳಿ ಸ್ಥಾಪಿಸುತ್ತಿರುವ 1015 ಮೆ ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರದ ಕಾಮಗಾರಿಯು ಪ್ರಾರಂಭದ ಹಂತದಲ್ಲಿದೆ

6) ಕರ್ನಾಟಕ ಸರ್ಕಾರವು ರಾಜ್ಯದ ಹಲವೆಡೆ ಒಟ್ಟು 4000 ಮೆ ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ತನ್ನ ದಿನಾಂಕ 13–07–2006 ರ ಆದೇಶದ ಮೂಲಕ ನಿಯೋಜಿಸಿದೆ

7) ತಲಾ 1000 ಮೆಗಾವ್ಯಾಟ್‌ಗಳಂತೆ ಒಟ್ಟು 3000 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಮೈಸೂರು ಜಿಲ್ಲೆಯ ಚಾಮಲಾಪುರದಲ್ಲಿ, ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಸ್ಥಾಪಿಸಲು ಉದ್ದೇಶಿಸಲಾಗಿದ್ದು, "ಆಸಕ್ತಿ ವ್ಯಕ್ತಪಡಿಸುವಿಕೆ" (Expression of interest) ಯನ್ನು ಆಹ್ವಾನಿಸಲಾಗಿದೆ

8) ಮಧ್ಯಮ ಹಾಗೂ ದೀರ್ಘಾವಧಿಗೆ ಅನುಕ್ರಮವಾಗಿ 1500 ಮೆಗಾವ್ಯಾಟ್ ಮತ್ತು 2500 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ತನ್ನು ಸರಬರಾಜು ಮಾಡಲು ವಿದ್ಯುತ್ ಉತ್ಪಾದಕರು / ವಿದ್ಯುತ್ ವಹಿವಾಟು ನಡೆಸುವ ಸಂಸ್ಥೆಗಳಿಂದ "ಆಸಕ್ತಿ ವ್ಯಕ್ತಪಡಿಸುವಿಕೆ"ಯನ್ನು ಆಹ್ವಾನಿಸಲಾಗಿದೆ

9) ಕೇಂದ್ರ ಸರ್ಕಾರದ ವತಿಯಿಂದ ತದ್ರಿ, ರತ್ನಗಿರಿ, ಕೃಷ್ಣಾಪಟ್ಟಂ ಮತ್ತು

ಚೇಯೂರುಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್‌ಗಳಿಂದ ಅನುಕ್ರಮವಾಗಿ 1,500 ಮೆ ವ್ಯಾಟ್, 500 ಮೆ ವ್ಯಾಟ್, 800 ಮೆ ವ್ಯಾಟ್ ಮತ್ತು 800 ಮೆ ವ್ಯಾಟ್ ವಿದ್ಯುತ್‌ನ್ನು ರಾಜ್ಯವು ತನ್ನ ಪಾಲಾಗಿ ಪಡೆಯಲು ಬದ್ಧವಾಗಿರುತ್ತದೆ

ಮುಂಬರುವ 3–4 ವರ್ಷಗಳಲ್ಲಿ ರಾಜ್ಯದ ವಿದ್ಯುತ್ ವ್ಯವಸ್ಥೆಗೆ ಸುಮಾರು 3000 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆಯನ್ನು ಸೇರ್ಪಡೆಗೊಳ್ಳಲು ರಾಜ್ಯ ಸರ್ಕಾರವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಈ ಪ್ರಯತ್ನ ಸಾಕಾರಗೊಂಡು, ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಅಭಾವದ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆ ಉಂಟಾಗುತ್ತದೆ ಎಂದು ನಿರೀಕ್ಷಿಸಲಾಗಿದೆ

1542 (2063) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) –ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಾರಿಗೆ ಚೆಕ್‌ಪೋಸ್ಟ್‌ಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ವಿವರ ನೀಡುವುದು)

ಆ) ಪ್ರಸ್ತುತ ವರ್ಷ ಈ ಚೆಕ್‌ಪೋಸ್ಟ್‌ಗಳಿಗೆ ನಿಗದಿಪಡಿಸಿರುವ ಆದಾಯದ ಗುರಿ ಎಷ್ಟು,

ಇ) ಪ್ರಸ್ತುತ ವರ್ಷ ಇಲ್ಲಿಯವರೆಗೆ ಎಷ್ಟು ಆದಾಯ ಸಂಗ್ರಹಿಸಲಾಗಿದೆ?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಜಿಲ್ಲವಾರು ವಿವರ ಈ ಕೆಳಕಂಡಂತಿದೆ –

ಜಿಲ್ಲೆ	ಚೆಕ್‌ಪೋಸ್ಟ್
ಬೆಂಗಳೂರು	ಅತ್ತಿಬೆಲೆ